Sri K. PUTTASWAMY (Srirangapatna).—Which Government has the supervisory control over the Directorate?

Sri K. HANUMANTHAIYA—Certainly, the Government of India.

Sri K. PUTTASWAMY.—Is the Mysore Government consulted in matters concerning the management of the Factory?

Sri K. HANUMANTHAIYA.—Yes, whenever found necessary.

Sri K. PUTTASWAMY.—Are there any occasions when the Mysore Government was consulted before?

Sri K. HANUMANTHAIYA.—Yes.

Sri K. PUTTASWAMY.—Will the Government state if there were any such occasions in the year 1951-52?

Sri K. HANUMANTHAIYA.—Notice.

Industrial Concerns working at a loss.

Q.—50. **Sri G. NARAYANA GOWDA** (Mulbagal—Srinivaspur).—

Will the Government be pleased to state:

The State-owned industrial concerns that are running at a loss?

A.—**Sri T. SIDDALINGAIYA** (Minister for Industries).—

According to the provisional accounts of Government Industrial Concerns for 1951-52, only the Mysore Implements Factory, Hassan, has worked at a loss.

ಶ್ರೀ ಜಿ. ನಾರಾಯಣಗೌಡರು.—ಇದು ಯಾವಾಗ ಪ್ರಾರಂಭವಾಯಿತು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು ಹತ್ತು ವರ್ಷಗಳಾಗಿವೆ.

ಶ್ರೀ ಜಿ. ನಾರಾಯಣಗೌಡರು.—ಇದಕ್ಕೆ ಎಷ್ಟು ಇನ್ವೆಸ್ಟ್ ಮಾಡಿದ್ದೀರಿ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಜಿ. ನಾರಾಯಣಗೌಡರು.—ಇದು ಪ್ರಾರಂಭವಾದಾಗಿನಿಂದ ಯಾವಾಗಲಾದರೂ ಲಾಭ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಜಿ. ನಾರಾಯಣಗೌಡರು.—ಯಾವಾಗ, ಯಾವ ವರ್ಷದಲ್ಲಿ?

Sri T. SIDDALINGAIYA.—Details are not available at present.

ಶ್ರೀ ಜಿ. ನಾರಾಯಣಗೌಡರು.—ಇದರಲ್ಲಿ ನಷ್ಟ ಬರುವುದಕ್ಕೆ ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವು ತಯಾರು ಮಾಡತಕ್ಕ ಸಾಮಾನುಗಳಿಗೆ ಅಖಿಲ ಭಾರತದ ಕಾಂಪಿಟಿಷನ್ ಬಹಳವಾಗಿದೆ. ಜಂಷೆಡ್‌ಪುರದ ತಾತಾ ವರ್ಕ್ಸ್‌ನವರು ಸ್ವಲ್ಪ ಕಡಮೆ ದರದಲ್ಲಿ ತಯಾರು ಮಾಡಿ ಮಾರುತ್ತಾರೆ.

ಶ್ರೀ ಜಿ. ನಾರಾಯಣಗೌಡರು.—ನಮ್ಮ ಸಾಮಾನುಗಳಿಗೆ ಹೆಚ್ಚು ಬೆಲೆ ಆಗಿರುವುದಕ್ಕೆ ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು. ನಾವು ಇದನ್ನು ಹೆಚ್ಚು ಮೆಕನೈಸ್ ಮಾಡಿಲ್ಲ.

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ನಷ್ಟ ಆಗುತ್ತಿದೆ ಎಂದು ಕೇಳಿದಿರಿ. ಕಳೆದ ಸಾಲಿನಲ್ಲಿ ಎಷ್ಟು ನಷ್ಟ ಆಯಿತು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 15,000 ರೂಪಾಯಿ.

ಶ್ರೀ ಕೆ. ಲಕ್ಕಪ್ಪನವರು.—ಎಷ್ಟು ವರ್ಷದಿಂದ ನಷ್ಟ ವಾಗುತ್ತಾ ಇದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದುವರೆಗೂ ಆಗಿರಲಿಲ್ಲ.

ಶ್ರೀ ಕೆ. ಲಕ್ಕಪ್ಪನವರು. ಈಗ ಹೊಸದಾಗಿ ಏನಾದರೂ ಈ ಫ್ಯಾಕ್ಟರಿಯನ್ನು ಅಭಿವೃದ್ಧಿಪಡಿಸಬೇಕೆಂದು ಇಂಪ್ರೂವ್ಡ್ ಮೆಷಿನೆರಿ ತರಿಸಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಪ್ರಪೋಸಲ್ ಇದೆ. ಸ್ಯಾಂಕ್ಷನ್ ಮಾಡಿಲ್ಲ.

ಶ್ರೀ ಕೆ. ಲಕ್ಕಪ್ಪನವರು.—ಆ ಫ್ಯಾಕ್ಟರಿಯ ಓವರ್ ಹೆಡ್ ಚಾರ್ಜಸ್ ಜಾಸ್ತಿಯಾಗುತ್ತಿದೆ ಎಂಬುದು ಗೊತ್ತೇ?

ಶ್ರೀ ಟಿ. ಸಿದ್ದಲಿಂಗಯ್ಯನವರು. ಅದಕ್ಕೋಸ್ಕರವೇ ಎಕಾನಮೈಸ್ ಮಡಬೇಕೆಂದು ರಿಟ್ರೆಂಚ್‌ಮೆಂಟ್ ಮಾಡುತ್ತಾ ಇದೆ.

ಶ್ರೀ ಕೆ. ಲಕ್ಕಪ್ಪನವರು.—ಅಲ್ಲಿ ಅನೇಕ ಚೀಪ್ ಸಾಮಾನುಗಳನ್ನು ಮಾಡುತ್ತಾ ಇರುವುದರಿಂದ ಆ ಕಂಪೆನಿ ಹೆಚ್ಚು ಅಭಿವೃದ್ಧಿಗೆ ಬರುವುದಕ್ಕೆ ಅವಕಾಶವಿಲ್ಲ ಎಂಬುದು ಗೊತ್ತೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಕೆ. ಲಕ್ಕಪ್ಪನವರು. ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಂಡಿತವಾಗಿಯೂ ಮಾಡುತ್ತೇವೆ.

Sri G. A. THIMMAPPA GOWDA (Arkalgud).—May I know the details of the expansion scheme?

Mr. SPEAKER.—The Hon'ble Minister has already said that it is under consideration.

Sri G. A. THIMMAPPA GOWDA.—There is already a scheme.

Mr. SPEAKER.—Government have fully answered the question.

Expanding Production in Government Electric Factory, Bangalore.

Q.—309. **Sri H. S. RUDRAPPA** (Honnali).—

Will the Government be pleased to state:—

(*a*) whether they have any proposal to expand the production in the

Government Electric Factory at Bangalore;

(*b*) if so, the estimated extra cost for the expansion of the Factory;

(*c*) whether there is any proposal to take help from a foreign firm for the expansion of the Factory;

(*d*) whether any agreement has been concluded in this respect?

A—**Sri T. SIDDALINGAIYA** (Minister for Industries).—

(*a*) (*b*) and (*c*) Yes. The Westinghouse Electric International Company of New York have submitted a scheme for the expansion of Government Electric Factory, Government Porcelain Factory and Mysore Lamp Works at an estimated cost of Rs. 10 crores.

(*d*) No.

ಶ್ರೀ ಎಚ್. ಎಸ್. ರುದ್ರಪ್ಪನವರು.—ಈ ಯೋಜನೆಯನ್ನು ಅವರು ಕಳುಹಿಸಿದ್ದು ಯಾವಾಗ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 1½ ವರ್ಷ ಆಗಿರಬೇಕು.

ಶ್ರೀ ಎಚ್. ಎಸ್. ರುದ್ರಪ್ಪನವರು.—ಈ ಯೋಜನೆ ಮೇಲೆ ಸರ್ಕಾರದವರು ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಏನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪನವರು.—ಕಾರಣ ಏನು ಎಂಬುದನ್ನು ಹೇಳುತ್ತೀರಾ? ಯೋಜನೆ ಮಾಡಿದ್ದೇವೆ ಎಂದ ಹೇಳಿರುತ್ತೀರಿ. ಯೋಜನೆ ಮಾಡಿದ್ದರೂ ಅದು ಅಸಾಧ್ಯವಾದದ್ದು ಎಂದು ಬಿಟ್ಟಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯೋಜನೆ ಮಾಡಿ ಯಾವ ತೀರ್ಮಾನಕ್ಕೂ ಬಾರದೇ ಇರುವುದರಿಂದ ಹಾಗೆ ಬಿಟ್ಟಿದೆ.

ಶ್ರೀ ಎಚ್. ಎಸ್. ರುದ್ರಪ್ಪನವರು.—ಜಪಾನಿನ ಫರ್ಮ್ ಯಾವುದಾದರೂ ಎಲೆಕ್ಟ್ರಿಕ್ ಫ್ಯಾಕ್ಟರಿ ಅಭಿವೃದ್ಧಿಪಡಿಸುತ್ತೇವೆ ಎಂಬುದಾಗಿ ಒಂದು ಯೋಜನೆ ಕೊಟ್ಟಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು —ಎಲೆಕ್ಟ್ರಿಕ್ ಫ್ಯಾಕ್ಟರಿ ಅಭಿವೃದ್ಧಿಪಡಿಸುವ ಬಗ್ಗೆ ಜಪಾನಿನ ಫರ್ಮ್ ಯಾವುದೂ ಯೋಜನೆ ಕೊಟ್ಟಿಲ್ಲ.

ಶ್ರೀ ಎಚ್ ಎಸ್. ರುದ್ರಪ್ಪನವರು —ಪೇಪರ್ಸ್‌ನಲ್ಲಿ 'ಜಪಾನಿನ ಫರ್ಮ್‌ನವರು ಕೆಲವರು ಇದರ ಸಂಬಂಧವಾಗಿ ಸರ್ಕಾರದವರಿಗೆ ಒಂದು ಸ್ಕೀಂ ಕೊಟ್ಟಿದ್ದಾರೆ. ಅದು ಸರ್ಕಾರದ ಆಲೋಚನೆಯಲ್ಲಿದೆ' ಎಂದು ಬಂದಿತ್ತು. ಅದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಎಚ್. ಎಸ್. ರುದ್ರಪ್ಪನವರು.—ಹಾಗಾದರೆ ಡಿಪಾರ್ಟ್‌ಮೆಂಟ್‌ನವರು ಪತ್ರಿಕೆಗಳಲ್ಲಿ ಬಂದ ಅಭಿಪ್ರಾಯವನ್ನು ಅದು ನಿಜವೇ, ಸುಳ್ಳೇ ಎಂಬುದನ್ನು ತಮ್ಮ ಗಮನಕ್ಕೆ ತರಲು ಡಿಪಾರ್ಟ್‌ಮೆಂಟಿನವರಿಗೆ ಸಲಹೆ ಕೊಟ್ಟಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾರು ಬೇಕಾದರೂ ಅದನ್ನು ಗಮನಕ್ಕೆ ತರಬಹುದು. ಅದನ್ನು ಒಪ್ಪಿಕೊಳ್ಳಬೇಕಾದರೆ ಒಪ್ಪಿಕೊಳ್ಳಬಹುದು; ಬಿಡಬೇಕಾದರೆ ಬಿಡಬಹುದು ಪೇಪರ್ಸ್‌ನಲ್ಲಿ ಬರುವುದನ್ನು ನಂಬುವುದಕ್ಕಾಗುವುದಿಲ್ಲ ಎಂದು ತಮಗೆ ಹೇಳುವುದಿಲ್ಲ.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ-ಅನುಸೂಚಿತ ಜಾತಿಗಳು).—ಬೆಂಗಳೂರಿನಲ್ಲಿರುವ ಫೋರ್ಸಿಲೇನ್ ಫ್ಯಾಕ್ಟರಿ ಹಿಂದೆ ಅಭಿವೃದ್ಧಿಯಾದದ್ದು ಯಾವಾಗ?

Sri T SIDDALINGAIYA.—That does not arise, Sir.

ಶ್ರೀ ಜಿ. ದುಗ್ಗಪ್ಪನವರು.—ಫೋರ್ಸಿಲೇನ್ ಫ್ಯಾಕ್ಟರಿಯಲ್ಲಿ ಎಲೆಕ್ಟ್ರಿಕ್ ಫರ್ನೇಸ್ ಇರುವುದು ಸರ್ಕಾರದವಂಗೆ ಗೊತ್ತೆ?

Sri T. SIDDALINGAIYA.—That does not arise out of this question.

Sri Mulka GOVINDA REDDY (Chitaldrug).—Was this International Company of New York asked to submit a scheme at the instance of the Mysore Government or at the instance of the American Embassy in India?

Sri T. SIDDALINGAIYA.—Both come together.

Sri Mulka GOVINDA REDDY.—How much amount was paid to them by the Government of Mysore?

Sri T. SIDDALINGAIYA.—Notice.

Sri Mulka GOVINDA REDDY.—Shall I take it that you have paid some lakhs for submitting this scheme?

Sri T. SIDDALINGAIYA.—I have already answered—"Notice".

ಶ್ರೀ ಆರ್. ಅನಂತರಾಮನ್‌ರವರು (ಚಾಮರಾಜಪೇಟೆ).—ಸ್ವಾಮಿ ಹಿಂದೆ ಎಲೆಕ್ಟ್ರಿಕ್ ಫ್ಯಾಕ್ಟರಿ ಅಭಿವೃದ್ಧಿ ಮಾಡಬೇಕೆಂದು ಕೆಲವು ಮೆಷಿನರಿ ಈ ಫ್ಯಾಕ್ಟರಿಗೆ ತಂದದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಆರ್. ಅನಂತರಾಮರ್ಮರವರು.—ಆ ಮೆಷಿನರಿಗಳಿಗೆ ಈಗ ಕೆಲಸವಿಲ್ಲದೆ ನುಮ್ಮನೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಆರ್. ಅನಂತರಾಮನ್‌ರವರು.—ಕೆಲವು ಮೆಷಿನರಿ ಕಿರ್ಲೋಸ್ಕರ್ ಕಂಪೆನಿಗೆ ಕೊಟ್ಟಿರುವುದು ಗೊತ್ತೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟರು (ಶಿವಮೊಗ್ಗ)—10 ಕೋಟಿ ರೂಪಾಯಿ ಯೋಜನೆ ಕೊಟ್ಟಿದ್ದಾರೆ ಎಂದು ತಿಳಿದ್ದೀರಿ. ಸ್ವಲ್ಪ ಸ್ವಲ್ಪ ಕೆಲಸ ಮಾಡಿ, ಸ್ವಲ್ಪ ಸ್ವಲ್ಪ ಬಂಡವಾಳ ಹಾಕುತ್ತಾ ಹೋಗಬಹುದಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸರ್ಕಾರದವರು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟರು.—ಈ ಹತ್ತು ಕೋಟಿ ರೂಪಾಯಿ ನಮ್ಮ ಸರ್ಕಾರದವರೇ ಹಾಕಬೇಕೇ ಅಥವಾ ಕಂಪೆನಿಯವರು ಹಾಕುತ್ತಾರೆಯೇ?

ಶ್ರೀ ಟಿ. ಸಿದ್ಧಲಿಂಗಯ್ಯನವರು.—ಯಾವ ಷರತ್ತನ್ನು ಕೂಡ ಇನ್ನೂ ಗೊತ್ತುಮಾಡಿಕೊಂಡಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿರು.—ಅವರು ಪ್ರಪೋಸಲ್ ಏನು ಕೊಟ್ಟಿದ್ದಾರೆ! 10 ಕೋಟಿ ರೂಪಾಯಿ ನಾವೇ ಹಾಕಿ ಕೈಗಾರಿಕೆ ನಡೆಸುತ್ತೇವೆ ಎಂದು ಹೇಳುತ್ತಾರೆಯೋ ಅಥವಾ ಸರ್ಕಾರದವರೇ ಹಾಕಬೇಕು, ಅಗ್ರಿಮೆಂಟ್‌ನಂತೆ ನಡೆದುಕೊಂಡು ಹೋಗುತ್ತೇವೆ ಎಂದು ಹೇಳುತ್ತಾರೆಯೋ?

ಶ್ರೀ ಟಿ. ಸಿದ್ಧಲಿಂಗಯ್ಯನವರು.—ಷರತ್ತು ಫೈನಲೈಸ್ ಆಗುವವರೆಗೂ ಪಬ್ಲಿಕ್ ಮಾಡುವುದು ಒಳ್ಳೆಯದಲ್ಲ.

ಶ್ರೀ ಎಸ್. ಆರ್ ನಾಗಪ್ಪಶೆಟ್ಟರು.—ದೇಶದ ಹಿತದೃಷ್ಟಿಯಿಂದ, $1\frac{1}{2}$ ವರ್ಷ ಪ್ರಪೋಸಲ್ ಹಾಗೇ ಇಟ್ಟುಕೊಂಡು ಪರದೇಶಗಳಿಂದ ಸಾಮಾನುಗಳನ್ನು ನಮ್ಮ ದೇಶಕ್ಕೆ ಇಂಥಾ ಫ್ಯಾಕ್ಟರಿ ಇದ್ದೂ ತರಿಸುವುದು ನಷ್ಟವಲ್ಲವೇ?

ಶ್ರೀ ಟಿ. ಸಿದ್ಧಲಿಂಗಯ್ಯನವರು.—ಅದನ್ನು ಎಚಾರ ಮಾಡಿ ಬೇಗ ತೀರ್ಮಾನಮಾಡಿಬಿಡುತ್ತೇವೆ.

Industrial loans granted and repayment.

Q.—437. **Sri D. M. GOVINDARAJU** (Nelamangala).—

Will the Government be pleased to state:—

(*a*) the number of persons to whom industrial loans have been given so far (details to be furnished);

(*b*) the amount of loan fixed for different industries:

(*c*) whether instalments towards repayment of loans are being regularly received?

A.—**Sri T. SIDDALINGAIYA** (Minister for Industries).—

(*a*) As the period for which the information is required has not been indicated, no details can be furnished.

(*b*) No limits have been fixed

(*c*) Not in all cases. Coercive action is taken for recovery in cases of default.

ಶ್ರೀ ಡಿ. ಎಂ. ಗೋವಿಂದರಾಜುರವರು.—ಕೈಗಾರಿಕಾ ಸಾಲವನ್ನು ಎಷ್ಟು ದಿನದಿಂದ ಕೊಡುತ್ತಾ ಇದ್ದೀರಿ?

ಶ್ರೀ ಟಿ. ಸಿದ್ಧಲಿಂಗಯ್ಯನವರು.—ಒಬ್ಬೀರಾಯನ ಕಾಲದಿಂದಲೂ ಕೊಡುತ್ತಾ ಇದ್ದೇವೆ (ನಭೆಯಲ್ಲಿ ನಗು!)

ಶ್ರೀ ಡಿ ಎಂ. ಗೋವಿಂದರಾಜುರವರು —ಕೈಗಾರಿಕಾ ಸಾಲ ಕೊಡುವ ಉದ್ದೇಶವೇನು?

ಶ್ರೀ ಟಿ. ಸಿದ್ಧಲಿಂಗಯ್ಯನವರು —ಕೈಗಾರಿಕೆಗಳನ್ನು ದೇಶದಲ್ಲಿ ಅಭಿವೃದ್ಧಿಗೆ ತರಬೇಕೆಂಬುದೇ ಉದ್ದೇಶ.

Prohibiting Dowry system.

Q.—30. **Sri H. C. LINGA REDDY** (Malur).—

Will the Government be pleased to state:—

(*a*) whether the dowry system is in vogue in the State;

(*b*) whether they are contemplating prohibiting the same through legislation?

A.—**Sri A. G. RAMACHANDRA RAO** (Minister for Law and Education).—

(*a*) Some people do insist on dowries and such dowries are given. But it cannot be asserted that dowry as a system is prevalent in the State.

(*b*) No.

Sri H. C. LINGA REDDY.—Among what classes is this pernicious system of dowry prevalent?

Sri A. G. RAMACHANDRA RAO.—Not in any particular community. We hear about stray cases from all communities.

Sri H. C. LINGA REDDY.—Are the Government aware of the havoc caused by this evil?

Sri A. G. RAMACHANDRA RAO.—It is a matter of opinion.

Sri H. C. LINGA REDDY.—Is it not a social evil?

Sri A. G. RAMACHANDRA RAO.—It is a social evil to be removed by social work rather than by legislation.

Sri H. C. LINGA REDDY.—Do the Government come to know that among Vysyas and Brahmins this system is prevalent on a very large scale and as a result they are very much suffering?

Sri A. G. RAMACHANDRA RAO.—Not as a system.

Sri H. C. LINGA REDDY.—But as what?

Sri A. G. RAMACHANDRA RAO.—Stray cases we are hearing.

Sri H. C. LINGA REDDY.—Do not the public expected that this social evil should be removed?

Sri A. G. RAMACHANDRA RAO.—Yes, by means of social work.

Sri H. C. LINGA REDDY.—Therefore do the Government consider that it is